# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025.

ದೂರವಾಣಿ: 0836–2222392 ಫ್ಯಾಕ್ಸ್: 0836–2223392


ಸಂಖ್ಯೆ: ಕರಾಕಾವಿ/ಆಡಳಿತ/ಭ.ಸಿ.ಟೆಂಡರ್/2022–23/ 0292. ದಿನಾಂಕ: 07/05/22

## ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿಗಳನ್ನು ಒದಗಿಸುವ ಕುರಿತು ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಚರ ಮತ್ತು ಸ್ಥಿರಾಸ್ತಿಗಳ ಸುರಕ್ಷತೆಗಾಗಿ ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಯಶಸ್ವಿ ಟೆಂಡರುದಾರರು ಈ ಕಛೇರಿಯಲ್ಲಿ ಕರಾರು ಒಪ್ಪಂದಕ್ಕೆ ಸಹಿ ಮಾಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಥವಾ ಖಾಯಂ ಸಿಬ್ಬಂದಿ ನೇಮಕಾತಿ ಮಾಡುವ ದಿನಾಂಕದವರೆಗೆ ಅಥವಾ ಈ ಕಛೇರಿಯ ಮುಂದಿನ ಆದೇಶ ಆಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕದ ಅವಧಿಯವರೆಗೆ ಭದ್ರತಾ ನೌಕರರ ಸೇವೆಯನ್ನು ಪೂರೈಸಲು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಹೊರಗುತ್ತಿಗೆದಾರರಿಂದ / ಏಜನ್ಸಿದಾರರಿಂದ **"ತಾಂತ್ರಿಕ ಬಿಡ್"** ಹಾಗೂ **"ಆರ್ಥಿಕ ಬಿಡ್"** ಆಧಾರದ ಮೇಲೆ **ಇ–ಪ್ರೊಕ್ಯೂರಮೆಂಟ್** ಪೋರ್ಟಲ್ ಮೂಲಕ ದಿನಾಂಕ: 21.05.2022ರಂದು **05.00 ಗಂಟೆಯ**ವರೆಗೆ ಟೆಂಡರನ್ನು ಆಹ್ವಾನಿಸಲಾಗಿದೆ.

1. **"ತಾಂತ್ರಿಕ ಬಿಡ್"**ಗಳನ್ನು **ದಿನಾಂಕ: 23.05.2022 ರಂದು 3.30ಗಂಟೆಗೆ** ಅಥವಾ ಅಂದು ಸಾಧ್ಯವಾಗದಿದ್ದಲ್ಲಿ ಮರುದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವದು.
2. **"ಆರ್ಥಿಕ ಬಿಡ್"**ಗಳನ್ನು, ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ ತೆರೆಯಲಾಗುವದು.
3. ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರನ್ನು ಆರ್ಥಿಕ ಬಿಡ್‌ಗಾಗಿ ಪರಿಗಣಿಸಲಾಗುವದು.
4. ಟೆಂಡರ ಅಧಿಸೂಚನೆಯ ವಿವರವಾದ ಮಾಹಿತಿ ಹಾಗೂ ಇತರೆ ಷರತ್ತುಗಳ ಬಗ್ಗೆ ಈ ವಿಶ್ವವಿದ್ಯಾಲಯದ ಜಾಲತಾಣವನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.
5. **"ತಾಂತ್ರಿಕ ಬಿಡ್"** ಹಾಗೂ **"ಆರ್ಥಿಕ ಬಿಡ್"** ಸ್ವೀಕರಿಸಲು ಹಾಗೂ ತೆರೆಯಲು ನಿಗದಿಪಡಿಸಿದ ದಿನಾಂಕಗಳನ್ನು ಪರಿಷ್ಕರಿಸುವ/ಮುಂದೂಡುವ ಸಂಪೂರ್ಣ ಅಧಿಕಾರವನ್ನು ಈ ವಿಶ್ವವಿದ್ಯಾಲಯದ ಕುಲಸಚಿವರು ಹೊಂದಿರುತ್ತಾರೆ.
6. ಸದರಿ ಟೆಂಡರ್ ಪ್ರಕ್ರಿಯೆ ಇ–ಪೋರ್ಟಲ್ ಸೇವೆಯಾಗಿದ್ದು ಸಂಪೂರ್ಣ ಪಾರದರ್ಶಕವಾಗಿರುತ್ತದೆ.

**ತಾಂತ್ರಿಕ ಟೆಂಡರ್ (Technical Bid)**

ತಾಂತ್ರಿಕ ಟೆಂಡರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರು ಈ ಕೆಳಗೆ ನಮೂದಿಸಿದ ಎಲ್ಲ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಇ–ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಹಾಗೂ ಅಂತಹ ಟೆಂಡರುದಾರರ ಟೆಂಡರುಗಳನ್ನು ಮಾತ್ರ ಮುಂದಿನ ಪ್ರಕ್ರಿಯೆಗೆ ಯಶಸ್ವಿ ಬಿಡ್‌ಗಳೆಂದು ಪರಿಗಣಿಸಲಾಗುವುದು. ಮೂಲ ದಾಖಲೆಗಳ ನೈಜತೆಯನ್ನು ಪರಿಶೀಲಿಸಿ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ವಿಶ್ವವಿದ್ಯಾಲಯವು ಹೊಂದಿರುತ್ತದೆ.

Tenderers are required to scan the following documents and to upload in the e-portal compulsorily, then only it will be treated as a responsive Bid and the

Tenderers are required to scan the following documents and to upload in the e-portal compulsorily, then only it will be treated as a responsive Bid and the University reserves the right either to accept or to reject the Bid depending upon the authentication of the original Documents.

## ಟೆಂಡರಿನ ಜೊತೆ ಕಡ್ಡಾಯವಾಗಿ ಲಗತ್ತಿಸಬೇಕಾದ ದಾಖಲಾತಿಗಳು (Mandatory Documents accompany with the Tender)

| | | |
|---|---|---|
| 1. | ಸಕ್ಷಮ ಪ್ರಾಧಿಕಾರಗಳಿಂದ ಭವಿಷ್ಯ ನಿಧಿ ನೋಂದಣಿ ಪತ್ರ.<br>Provident Fund Registration letter from the Competent Authority. | ಅಂಕಗಳು<br>10 |
| 2. | ಸಕ್ಷಮ ಪ್ರಾಧಿಕಾರಗಳಿಂದ ನೌಕರರ ರಾಜ್ಯ ವಿಮೆ ನೋಂದಣಿ ಪತ್ರ<br>Employees State Insurance Registration letter from the Competent Authority. | 10 |
| 3. | ಕಾರ್ಮಿಕ ಇಲಾಖೆಯಿಂದ, ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೀಡುವ ಸಲುವಾಗಿ ಪಡೆದುಕೊಂಡಂತಹ ನೋಂದಣಿ ಪತ್ರ ಹಾಗೂ ಅದರ ಸಂಖ್ಯೆ.<br>Registration No. and letter issued by the Labour Department towards supply of security employees on outsource basis. | 10 |
| 4. | ಈಗಾಗಲೇ ಯಾವುದೇ ಸರಕಾರಿ ಇಲಾಖೆ, ಅರೆಸರಕಾರಿ ಇಲಾಖೆ/ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಭದ್ರತಾ ಸಿಬ್ಬಂದಿಗಳ ಭವಿಷ್ಯ ನಿಧಿ ಹಾಗೂ ನೌಕರರ ರಾಜ್ಯ ವಿಮಾ ಪಾವತಿ ಮಾಡಿದ ಬಗ್ಗೆ ವಿವರ. ಅಂದರೆ, ಇ.ಪಿ.ಎಫ್.ಗೆ ಸಂಬಂಧಿಸಿದಂತೆ [Employees Provident Fund Scheme 1952, para No. 38(3)] ರಲ್ಲಿ ನಮೂದಿಸಿದಂತೆ ಕಳೆದ ಸಾಲಿನಲ್ಲಿ ಪಾವತಿ ಮಾಡಿದ ವಾರ್ಷಿಕ ವಂತಿಕೆ ತಖ್ತೆ ಹಾಗೂ ಇ.ಎಸ್.ಐ. ಪಾವತಿ ಮಾಡಿದ ಬಗ್ಗೆ ಆ ಇಲಾಖೆಯಿಂದ ಪಡೆದುಕೊಂಡ ಹಾಗೂ ದೃಢೀಕರಣಗೊಳಿಸಿದ ವಾರ್ಷಿಕ ವಂತಿಕೆಯ ತಃಖ್ತೆ (Statement)<br>Particulars of EPF and ESI pertaining to security staff engaged on outsource basis in any Government Department/Private Organizations i.e., payment of EPF Annual Contribution in ECR copy (duly attested) as per para No.38(3) of Employees Provident Fund Scheme 1952 and statement of ESI Annual Contribution ECR Copy paid during last year. | 10 |
| 5. | ಕಳೆದ 2 ವರ್ಷ, ಅಂದರೆ 2019-20 ಹಾಗೂ 2020-21ನೇ ಸಾಲಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಪಾವತಿಸಿದ ಬಗ್ಗೆ ದೃಢೀಕೃತ ವಾರ್ಷಿಕ ರಿಟರ್ನ್ ಪ್ರತಿಗಳು.<br>The certified copies of Income Tax returns for the last 2 years i.e. 2019-20 and 2020-21 | 10 |
| 6. | ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಜಿಎಸ್‌ಟಿ ನೋಂದಣಿ ಪತ್ರದ ದೃಢೀಕೃತ ಪ್ರತಿ (ನಿಗದಿತ ನಮೂನೆ)<br>GST Registration certificate, duly attested by the Competent Authority. | 10 |
| 7. | 2019-20 ಹಾಗೂ 2020-21 (Assessment year) ನೇ ಸಾಲಿಗೆ ಸಂಬಂಧಿಸಿದ ಇಲಾಖೆಯಿಂದ ದೃಢೀಕೃತಗೊಂಡ, ಜಿಎಸ್‌ಟಿ ಪಾವತಿ ಮಾಡಿದ ಬಗ್ಗೆ ಇತ್ತೀಚಿನ ಎರಡು ರಿಟರ್ನ್‌ಗಳ ಪ್ರತಿಗಳು.<br>Payments of GST returns for the year of 2019-20 and 2020-21(Assessment year) returns, duly attested by the concerned department. | 10 |
| 8. | 2019-20 ಹಾಗೂ 2020-21 ಸಾಲಿಗೆ ಸರಕಾರಿ/ಅರೆಸರಕಾರಿ ಇಲಾಖೆ ಅಥವಾ ಯಾವುದೇ ಸಂಸ್ಥೆಯಲ್ಲಿ 20ಕ್ಕಿಂತ ಕಡಿಮೆ ಇಲ್ಲದಂತೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಣೆ ಮಾಡಲು ಭದ್ರತಾ ಸಿಬ್ಬಂದಿ ನೀಡಿದ ಕುರಿತು ಸಂಬಂಧಪಟ್ಟವರ ಹೆಸರು, ದೂರವಾಣಿ ಸಂಖ್ಯೆ, ಇತ್ಯಾದಿ ವಿವರಗಳನ್ನೊಳಗೊಂಡ ಸಂಬಂಧಪಟ್ಟವರಿಂದ ದೃಢೀಕರಣ ಪತ್ರ.<br>Attested letters for the years 2019-20 and 2020-21, from the concerned Government Department/Institutions for having provided not less than 20 security personnel on outsource basis i.e., number of employees, nature of work, name and telephone number of the organization. | 10 |

| | | |
|---|---|---|
| 9. | 2019-20 ಹಾಗೂ 2020-21 ನೇ ಸಾಲಿನಲ್ಲಿ ರೂ. 15.00 ಲಕ್ಷ ಅಥವಾ ಅದಕ್ಕೂ ಹೆಚ್ಚು ವಹಿವಾಟು ಮಾಡಿರುವ ಬಗ್ಗೆ ಚಾರ್ಟರ್ಡ್ ಅಕೌಂಟೆಂಟ್ ರವರಿಂದ ವಾರ್ಷಿಕ ವ್ಯವಹಾರ ಪತ್ರದ ದೃಢೀಕೃತ ಪ್ರತಿ.<br>Certified copy of the turnover letter, audited by the Chartered Accountant, a turnover showing more than Rs. 15.00 lakhs, for the financial year 2018-19 and 2019-20. | 10 |
| 10. | ಯಶಸ್ವಿ ಟೆಂಡರುದಾರರು ಈ ಕಚೇರಿಯಲ್ಲಿ ಕರಾರುನಾಮೆಗೆ ಸಹಿ ಮಾಡುವ ಪೂರ್ವದಲ್ಲಿ ಕಾರ್ಮಿಕ ಇಲಾಖೆಯಿಂದ ಈ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಫಾರ್ಮ್-5ನ್ನು ಪಡೆದು ಸಲ್ಲಿಸುವುದು ಕಡ್ಡಾಯ.<br>The successful tenderer needs to furnish Form No-5 concerning to engagement of outsource employees in this University from Labour Department compulsorily before execution of Agreement in this office. | 10 |
| 11 | ಸಂಸ್ಥೆಯ ಹೆಸರಿನಲ್ಲಿ ಟೆಂಡರ್ ಹಾಕಿದ ಪಕ್ಷದಲ್ಲಿ ಸಂಸ್ಥೆಯ ಪಾನ್ ಕಾರ್ಡನ್ನು, ವೈಯಕ್ತಿಕ ಹೆಸರಿನಲ್ಲಿ ಟೆಂಡರ್ ಹಾಕಿದಲ್ಲಿ ಮಾಲೀಕರ ಹೆಸರಿನಲ್ಲಿ ಪಾನ್ ಕಾರ್ಡ್ ಸಲ್ಲಿಸುವುದು ಕಡ್ಡಾಯ | |

**ಕಡ್ಡಾಯವಾಗಿ ಪಾಲನೆ ಮಾಡಬೇಕಾದ ಷರತ್ತುಗಳು (Mandatory conditions to observe) :**

1. ಹೊರಗುತ್ತಿಗೆ ಸೇವೆಗೆ ಸಂಬಂಧಿಸಿದಂತೆ ಗುತ್ತಿಗೆಯ ಒಟ್ಟು ಮೌಲ್ಯದ ಶೇಕಡಾ 2.5ರಷ್ಟು ಮೊತ್ತ ರೂ. **97,365/-** ಗಳನ್ನು ಇ.ಎಂ.ಡಿ (ಮುಂಗಡ ಹಣ ಠೇವಣಿ) ಎಂದು ಇ-ಪ್ರೊಕ್ಯೂರಮೆಂಟ್ ಮೂಲಕ ಆನ್ ಲೈನ್ ಮೇಲೆ ಸಲ್ಲಿಸಬೇಕು.

   Tenderers are required to pay 2.5% EMD on the total contract sum through online amounting to Rs. **97,365/-**.

2. ಉದ್ಯೋಗದಾತರ ಹಾಗೂ ನೌಕರರ ಪಾಲಿನ ಇ.ಎಸ್.ಐ. ಮತ್ತು ಇ.ಪಿ.ಎಫ್. ಮಾಸಿಕ ಕಂತುಗಳನ್ನು ನಿಯಮಾನುಸಾರ ಅವರವರ ಖಾತೆಗೆ ಸಂಬಂಧಿಸಿದ ಇಲಾಖೆಯಲ್ಲಿ ಭರಣಾ ಮಾಡಬೇಕು ಹಾಗೂ ವಿಶ್ವವಿದ್ಯಾಲಯಕ್ಕೆ ಪ್ರತಿ ತಿಂಗಳು ಪ್ರತ್ಯೇಕವಾಗಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಸಿಬ್ಬಂದಿಗಳ ವಿವರಣೆ ಮಾತ್ರ ಇರುವ ಇ.ಸಿ.ಆರ್. ಪ್ರತಿಯನ್ನು ಸಲ್ಲಿಸಬೇಕು.

   Employer and employee contributions towards ESI & EPF shall be remitted in the concerned Departments against employees accounts and seprate list of ECR copy consisting exclusive staff of the University shall be submitted to University every month.

3. ಅರ್ಹ ನೌಕರರಿಗೆ ಇ.ಎಸ್.ಐ. ಕಾರ್ಡುಗಳನ್ನು ಗುತ್ತಿಗೆ ಪ್ರಾರಂಭವಾದ ಒಂದು ತಿಂಗಳ ಒಳಗಾಗಿಯೇ ನೀಡಬೇಕು.

   ESI cards shall be issued to the eligible employees within one month from the date of commencement of contract.

4. ಈ ವಿಶ್ವವಿದ್ಯಾಲಯದ ಪೂರ್ವಾನುಮತಿ ಇಲ್ಲದೆ ಯಾವುದೇ ನೌಕರರನ್ನು ಹೊರಗುತ್ತಿಗೆ ಸೇವೆಯಿಂದ ತೆಗೆದುಹಾಕುವುದು ಅಥವಾ ಇನ್ನಿತರ ನೌಕರರನ್ನು ಹೆಚ್ಚುವರಿಯಾಗಿ ತೆಗೆದುಕೊಳ್ಳಬಾರದು.

   Without prior permission from this University, no employee engaged on outsource basis can be removed or extra employee can be engaged.

5. ಉಪಗುತ್ತಿಗೆ (ಸಬ್ ಕಾಂಟ್ರ್ಯಾಕ್ಟ್) ನೀಡಲು ಅವಕಾಶವಿರುವದಿಲ್ಲ.

   There is no provision to sub contract.

6. **ವೈಯಕ್ತಿಕ ಹೆಸರಿನಲ್ಲಿ ಟೆಂಡರ್‌ನ್ನು ನಮೂದಿಸಿದರೆ 1% ಹಾಗೂ ಸಂಸ್ಥೆ/ಏಜೆನ್ಸಿ/ಸೊಸೈಟಿಯ ಹೆಸರಿನಲ್ಲಿ ಟೆಂಡರ್ ನಮೂದಿಸಿದರೆ 2% ತೆರಿಗೆ ಕಡಿತಗೊಳಿಸಲಾಗುವುದು. ಕಾರಣ ಕಮೀಶನ್ ನಮೂದಿಸುವಾಗ ಶಾಸನಬದ್ಧ ತೆರಿಗೆಗಳನ್ನು ಗಮನದಲ್ಲಿಟ್ಟುಕೊಂಡು ನಮೂದಿಸುವುದು. ಅದಕ್ಕಿಂತ ಕಡಿಮೆ ನಮೂದಿಸಿದವರ ಆರ್ಥಿಕ ಬಿಡ್ ಅನೂರ್ಜಿತಗೊಳಿಸಲಾಗುವುದು.**

7. **ಹಣಕಾಸು ಬಿಡ್‌ನಲ್ಲಿ ಒಬ್ಬರಿಗಿಂತ ಹೆಚ್ಚು ಟೆಂಡರುದಾರರು L1 ಆದರೆ, ಸಂಬಂಧಿಸಿದ ಸಂಸ್ಥೆಯವರು ಒದಗಿಸಿರುವ ಭದ್ರತಾ ಸಿಬ್ಬಂದಿಗಳ ಪ್ರಸ್ತುತ ಮೂರು ಆರ್ಥಿಕ ವರ್ಷಗಳ ಸರಾಸರಿ ವಹಿವಾಟನ್ನು ಪರಿಗಣಿಸಲಾಗುವುದು. ಹೆಚ್ಚಿಗೆ ವಹಿವಾಟು ಹೊಂದಿದ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುವುದು.**

**ಸೂಚನೆ:** ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವದು. ತಾಂತ್ರಿಕ ಬಿಡ್‌ನ್ನು ಈ ಮೇಲೆ ನಮೂಸಿದ ಪ್ರಮಾಣ ಪತ್ರಗಳ ದಾಖಲಾತಿಗಳನ್ನು ಮೌಲ್ಯಮಾಪನ ಮಾಡಿ ಯಶಸ್ವಿ ಬಿಡ್‌ಗಳನ್ನು ಮಾತ್ರ ಪರಿಗಣಿಸಲಾಗುವದು. ಅಯಶಸ್ವಿ ಬಿಡ್‌ದಾರರ ಇ.ಎಂ.ಡಿ. ಮೊತ್ತದ ಹಣವನ್ನು, ಯಶಸ್ವಿ ಬಿಡ್‌ದಾರರು ಸೇವೆಯನ್ನು ಪೂರೈಸುವ ಕುರಿತು ಈ ಕಛೇರಿಯಲ್ಲಿ ಕರಾರುನಾಮೆಯನ್ನು ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.

After evaluation of technical bids, based on the above documents, the successful bidders financial bids will be opened. The Earnest Money Deposit of the unsuccessful tenderers will be refunded only after execution of agreement in this office, by the successful tenderer.

**ಆರ್ಥಿಕ ಟೆಂಡರ್ (Financial Bid)**

ಆರ್ಥಿಕ ಟೆಂಡರ್‌ಗೆ ಸಂಬಂಧಿಸಿದಂತೆ ಗುತ್ತಿಗೆದಾರರು ಟೆಂಡರ್ ನಮೂನೆಯಲ್ಲಿ, ತಾವು ನಿರೀಕ್ಷಿಸುವ ಏಜನ್ಸಿ ಕಮಿಷನ್ ಮಾತ್ರ (Only Agency commission) ಪ್ರತಿ ತಿಂಗಳು ಬಟವಡೆ ಮಾಡಲಾಗುವ ಒಟ್ಟು ಹುದ್ದೆಗಳ ನಿವ್ವಳ ವೇತನದ ಮೇಲೆ ಪ್ರತಿಶತ (%) ದರವನ್ನು ಟೆಂಡರಿನಲ್ಲಿ ನಮೂದಿಸತಕ್ಕದ್ದು.

Tenderers are to quote the (percentage) % of commission on the total net salary of all the staff.

**<u>ಇತರ ಷರತ್ತುಗಳು:</u>**

1. ಯಾವುದೇ ಕಾರಣವನ್ನು ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಸಂಪೂರ್ಣ ಅಧಿಕಾರ ಈ ವಿಶ್ವವಿದ್ಯಾಲಯದ ಕುಲಸಚಿವರು ಹೊಂದಿರುತ್ತಾರೆ.
2. ತಾಂತ್ರಿಕ ಟೆಂಡರ್‌ನ್ನು ಮೌಲ್ಯಮಾಪನಗೊಳಿಸಲು ಅಳವಡಿಸಲಾದ ಮಾನದಂಡಗಳನ್ನು ಆಧರಿಸಿ,ಅವುಗಳ ಸ್ಥಿತಿಗತಿಯನ್ನು ನಿರ್ಧರಿಸಲು ಈ ವಿಶ್ವವಿದ್ಯಾಲಯದ ಕುಲಸಚಿವರು ಅಧಿಕಾರವನ್ನು ಹೊಂದಿರುತ್ತಾರೆ.
3. ಈ ವಿಶ್ವವಿದ್ಯಾಲಯದ ಕುಲಸಚಿವರು ತೆಗೆದುಕೊಂಡ ನಿರ್ಣಯದ ಬಗ್ಗೆ ತಂಟೆ-ತಕರಾರುಗಳಿದ್ದಲ್ಲಿ ಈ ಕುರಿತು ಮೇಲ್ಮನವಿಯನ್ನು ಈ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಸಲ್ಲಿಸಬಹುದು. ಸದರಿಯವರ ನಿರ್ಣಯವೇ ಅಂತಿಮವಾದದ್ದು.

**ಭದ್ರತಾ ಸೇವೆಯನ್ನು ನೀಡುವ ಸಿಬ್ಬಂದಿಗಳ ವಿವರ ಈ ಕೆಳಗಿನಂತಿರುವುದು**

| ಅ. ನಂ. | ಒಂದು ದಿನಕ್ಕೆ ಬೇಕಾಗುವ ಭದ್ರತಾ ಸಿಬ್ಬಂದಿಗಳು | ವಿದ್ಯಾರ್ಹತೆ | ವೇತನ (ತಿಂಗಳಿಗೆ ಒಬ್ಬರಿಗೆ) | ಒಟ್ಟು ಮೊತ್ತ (ರೂಪಾಯಿಗಳಲ್ಲಿ) |
|---|---|---|---|---|
| 1. | ಭದ್ರತಾ ಸಿಬ್ಬಂದಿಗಳು 25 | 7ನೇ ತರಗತಿ ಉತ್ತೀರ್ಣ ಹಾಗೂ 2-3 ವರ್ಷಗಳ ಸೇವಾನುಭವ | ರೂ.12,982.00 (ತುಟ್ಟಿಭತ್ಯೆ ಸೇರಿಸಿ) | 12,982 x 25 = **3,24,550 (ಮಾಸಿಕ)**<br>3,24,550 x 12 = **38,94,600/-(ವಾರ್ಷಿಕ)** |
| ಕನಿಷ್ಠ ಕೂಲಿ ವೇತನ ಕಾಯ್ದೆಯ ಪ್ರಕಾರ ಕಾಲಕಾಲಕ್ಕೆ ಪರಿಷ್ಕರಿಸುವ ದರಕ್ಕೆ ಸಿಬ್ಬಂದಿಗಳ ವೇತನವನ್ನು ನಿಗದಿಪಡಿಸುವುದು. | | | | |

**ಷರತ್ತುಗಳು :**

1. ಯಶಸ್ವಿ ಟೆಂಡರುದಾರರು ತಾವು ಪಡೆದುಕೊಂಡಂತಹ ಗುತ್ತಿಗೆಯ ಒಟ್ಟು ಮೌಲ್ಯ **ರೂ. 38,94,600/-ಗಳ ಮೇಲೆ ಶೇಕಡಾ 5 ರಷ್ಟು ಮೊತ್ತ ರೂ. 1,94,730/-** ವನ್ನು **ಭದ್ರತಾ ಠೇವಣಿ** ಎಂದು ತಮಗೆ ಟೆಂಡರ್ ಸ್ವೀಕೃತಿ ಮಾಹಿತಿಯ ದಿನಾಂಕದಿಂದ 7 ದಿನಗಳೊಳಗೆ ಡಿ.ಡಿ. ರೂಪದಲ್ಲಿ ಮಾತ್ರ ಠೇವಣಿಯನ್ನು ಈ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳು (Finance Officer, KSLU, Hubballi) ಪದನಾಮದಲ್ಲಿ ತೆಗೆದುಕೊಂಡು ಕರಾರುನಾಮೆಯನ್ನು ಸಹಿ ಮಾಡುವ ಪೂರ್ವದಲ್ಲಿ ಈ ಕಚೇರಿಯಲ್ಲಿ ಸಲ್ಲಿಸಬೇಕು.
2. ಸದರಿ ಭದ್ರತಾ ಠೇವಣಿ ಮೊತ್ತದ ಹಣವನ್ನು ಗುತ್ತಿಗೆ ಕಾರ್ಯವನ್ನು ತೃಪ್ತಿಕರವಾಗಿ ಪೂರೈಸಿದ ಅವಧಿ ಮುಕ್ತಾಯದ ಎರಡು ತಿಂಗಳ ನಂತರ ಹಿಂದಿರುಗಿಸಲಾಗುವದು ಮತ್ತು ಅದಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
3. ಯಶಸ್ವಿ ಟೆಂಡರುದಾರರು ಸೇವೆಗಾಗಿ ಪೂರೈಸುವ ಎಲ್ಲ ಭದ್ರತಾ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಈ ವಿಶ್ವವಿದ್ಯಾಲಯವು ನೀಡುವ ಹಾಜರಾತಿ ಮೇರೆಗೆ ತಯಾರಿಸಲಾದ ವೇತನದ ಯಾದಿಗನುಗುಣವಾಗಿ, ವೇತನವನ್ನು ಪಾವತಿಸುವುದು. ಹಾಜರಾತಿ ವರದಿ ಸಲ್ಲಿಸಿದ 3 ದಿನಗಳಲ್ಲಿ ಈ ವಿಶ್ವವಿದ್ಯಾಲಯವು ನಿಗದಿ ಪಡಿಸಿದಂತೆ ನೌಕರನ ಪಾಲಿನ ಇ.ಎಸ್.ಐ. ಹಾಗೂ ಇ.ಪಿ.ಎಫ್. ಮೊತ್ತದ ಕಂತುಗಳನ್ನು ಅವರವರ ವೇತನದಲ್ಲಿ ಕಡಿತಗೊಳಿಸಿ ಹುಬ್ಬಳ್ಳಿ-ಧಾರವಾಡದಲ್ಲಿರುವ ಇ.ಎಸ್.ಐ. ಹಾಗೂ ಇ.ಪಿ.ಎಫ್. ಕಛೇರಿಯಲ್ಲಿ ಸಂಬಂಧಿಸಿದ ನೌಕರರ ಹೆಸರಿನಲ್ಲಿ ಖಾತೆಗಳನ್ನು ತೆರೆದು ಅವರವರ ಖಾತೆಗಳಿಗೆ ಜಮಾ ಮಾಡಬೇಕು.

   ನಂತರ ಆಯಾ ನೌಕರರ ಬ್ಯಾಂಕ ಖಾತೆಗೆ ವೇತನವನ್ನು ಜಮಾ ಮಾಡಬೇಕು. ಹೀಗೆ ಬಟವಡೆ ಮಾಡಿದ ನಂತರವೇ ಇದಕ್ಕೆ ಸಂಬಂಧಿಸಿದಂತೆ ಹಣ ಮರುಪಾವತಿಗಾಗಿ ಈ ವಿಶ್ವವಿದ್ಯಾಲಯಕ್ಕೆ ಬಿಲ್ಲನ್ನು ತಯಾರಿಸಿ ಸಲ್ಲಿಸತಕ್ಕದ್ದು.

   ಇ.ಎಸ್.ಐ. ನಿಯಮಾವಳಿಗಳ ಮೇರೆಗೆ ಅರ್ಹ ನೌಕರರಿಗೆ ಇ.ಎಸ್.ಐ. ಕಾರ್ಡುಗಳನ್ನು ಹಾಗೂ ಇತರ ಎಲ್ಲ ನೌಕರರಿಗೆ ಇ.ಪಿ.ಎಫ್. ಖಾತೆಯ ನೊಂದಣಿ ಸಂಖ್ಯೆನ್ನು ನೀಡಿದ ನಂತರವೇ ಅಂತಹ ನೌಕರರ ಎಂಪ್ಲಾಯರ್ ಪಾಲಿನ ಇ.ಎಸ್.ಐ./ಇ.ಪಿ.ಎಫ್. ಕಂತುಗಳನ್ನು ನೀಡಲಾಗುವುದು. ಪ್ರತಿ ನೌಕರರಿಗೆ ಇ.ಎಸ್.ಐ. ನೊಂದಣಿ ಸಂಖ್ಯೆ ಹಾಗೂ ಅರ್ಹ ನೌಕರರಿಗೆ ಇ.ಎಸ್.ಐ. ಕಾರ್ಡನ್ನು ನೀಡದೇ ಇದ್ದಲ್ಲಿ ಎಂಪ್ಲಾಯರ್ ಪಾಲಿನ ಇ.ಎಸ್.ಐ./ಇ.ಪಿ.ಎಫ್. ಕಂತುಗಳ ಮೊತ್ತವನ್ನು ನೀಡಲಾಗುವುದಿಲ್ಲ.
4. ಈ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಸಿಬ್ಬಂದಿಗಳ ಸಂಖ್ಯೆಯಲ್ಲಿ ಹೆಚ್ಚು ಅಥವಾ ಕಡಿಮೆ ಮಾಡಲು ಈ ವಿಶ್ವವಿದ್ಯಾಲಯವು ಅಧಿಕಾರವನ್ನು ಹೊಂದಿರುತ್ತದೆ.
5. ಈ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸ್ಟೇಟ್ ಬ್ಯಾಂಕನಲ್ಲಿ ಕಡ್ಡಾಯವಾಗಿ ಯಶಸ್ವಿ ಗುತ್ತಿಗೆದಾರರು / ಏಜನ್ಸಿಯವರು ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆಯತಕ್ಕದ್ದು.
6. ಭದ್ರತಾ ಸಿಬ್ಬಂದಿಗಳಿಗೆ ವೇತನ ಬಟವಡೆ ಮಾಡುವ ಕುರಿತು ಈ ವಿಶ್ವವಿದ್ಯಾಲಯವು ನೀಡುವ ಹಾಜರಾತಿ ವರದಿಯನ್ನು ಗುತ್ತಿಗೆದಾರರಿಗೆ ನೀಡಿದ 3 ದಿನಗಳ ಒಳಗಾಗಿ ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನ ಬಟವಡೆ ಮಾಡದೇ ಹೋದರೆ ದಂಡ ವಿಧಿಸುವ ಹಕ್ಕನ್ನು ವಿಶ್ವವಿದ್ಯಾಲಯ ಹೊಂದಿದೆ.
7. ಯಾವುದೇ ಭದ್ರತಾ ಸಿಬ್ಬಂದಿಯಿಂದ ಅವರ ವೇತನದಲ್ಲಿ ಈ ವಿಶ್ವವಿದ್ಯಾಲಯವು ನಿಗದಿ ಪಡಿಸಿದ ನೌಕರನ ಪಾಲಿನ ಇ.ಎಸ್.ಐ ಹಾಗೂ ಇ.ಪಿ.ಎಫ್ ಕಂತುಗಳನ್ನು ಹೊರತುಪಡಿಸಿ ಹೆಚ್ಚುವರಿಯಾದ ಇನ್ನಾವುದೇ ಮೊತ್ತವನ್ನು ಕಡಿತಗೊಳಿಸಬಾರದು ಹಾಗೂ ಈ ವಿಶ್ವವಿದ್ಯಾಲಯದ ಅನುಮತಿಯಿಲ್ಲದೇ ಯಾವುದೇ ಭದ್ರತಾ ಸಿಬ್ಬಂದಿಯನ್ನು ತೆಗೆಯುವುದಾಗಲಿ, ಪೂರೈಸುವದಾಗಲಿ ಅಥವಾ ಬದಲಿಸುವದಾಗಲಿ ಮಾಡಿದಲ್ಲಿ ಯಶಸ್ವಿ ಗುತ್ತಿಗೆದಾರರಿಗೆ ನೀಡಿದ ಹೊರಗುತ್ತಿಗೆಯನ್ನು ರದ್ದು ಮಾಡುವ ಅಧಿಕಾರವು ಈ ವಿಶ್ವವಿದ್ಯಾಲಯದ ಕುಲಸಚಿವರು ಅಧಿಕಾರವನ್ನು ಹೊಂದಿರುತ್ತಾರೆ.
8. ಹಿಂದಿನ ತಿಂಗಳಿನ ಇ.ಎಸ್.ಐ ಹಾಗೂ ಇ.ಪಿ.ಎಫ್ ವಂತಿಕೆಗಳನ್ನು ಕಡಿತಗೊಳಿಸಿ ಸಂಬಂಧಿಸಿದ ಇಲಾಖೆಗಳಲ್ಲಿ ಮಾಹೆವಾರು ಆಯಾ ನೌಕರರ ಹೆಸರಿನಲ್ಲಿ ಸಂದಾಯ ಮಾಡಿದ ಬಗ್ಗೆ, ಆಯಾ ಇಲಾಖೆಯಿಂದ ಪಡೆದಂತಹ ಗಣಕೀಕೃತ ಚಲನ್ ಹಾಗೂ ಇ.ಸಿ.ಆರ್. ಚಲನ್‌ಗಳ ಸ್ವ-ದೃಢೀಕೃತ ದಾಖಲಾತಿಗಳನ್ನು, ನೀಡಿದಲ್ಲಿ ಮಾತ್ರ ಆಯಾ ಮಾಸಿಕದ ಬಿಲ್ಲುಗಳನ್ನು ಮರುಪಾವತಿ ಮಾಡಲಾಗುವದು. ವಿಶ್ವವಿದ್ಯಾಲಯದ ನೌಕರರ ಹೆಸರುಗಳನ್ನು ಹೊಂದಿದ ಇ.ಸಿ.ಆರ್ ಚಲನ್‌ಗಳನ್ನು ನೀಡತಕ್ಕದ್ದು. ವಿಶ್ವವಿದ್ಯಾಲಯದ ನೌಕರರನ್ನು ಹೊರತುಪಡಿಸಿದ ನೌಕರರನ್ನೊಳಗೊಂಡ ಇ.ಸಿ.ಆರ್.

105

ಪ್ರತಿಯನ್ನು ಸಲ್ಲಿಸತಕ್ಕದ್ದಲ್ಲ.

9. ಈ ವಿಶ್ವವಿದ್ಯಾಲಯವು ಹೊರಗುತ್ತಿಗೆ ಭದ್ರತಾ ಸಿಬ್ಬಂದಿಗಳನ್ನು ಪೂರೈಸುವ ಕುರಿತಂತೆ, ಕಾಲಕಾಲಕ್ಕೆ ನೀಡಲಾಗುವ ಸಲಹೆ ಸೂಚನೆ, ಸುತ್ತೋಲೆ ಹಾಗೂ ಇತರೆ ಆದೇಶಗಳನ್ನು ಪಾಲಿಸಿಕೊಂಡು ಹೊರಗುತ್ತಿಗೆ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪೂರೈಸತಕ್ಕದ್ದು.

10. ಎಂಪ್ಲಾಯರ್ ಪಾಲಿನ **ಇ.ಪಿ.ಎಫ್, ಇ.ಎಸ್.ಐ.** ಕಂತುಗಳನ್ನು, ಗುತ್ತಿಗೆದಾರರ ಕಮೀಷನ್ ಹಾಗೂ ಸೇವಾ ತೆರಿಗೆಗಳನ್ನು ಮಾತ್ರ ಈ ವಿಶ್ವವಿದ್ಯಾಲಯವು ನೀಡುವದು. ಇನ್ನಿತರ ಯಾವುದೇ ತರಹದ ತೆರಿಗೆಗೆ ಸಂಬಂಧಿಸಿದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಂಬಂಧಪಟ್ಟ ಇಲಾಖೆಗಳು ವಿಧಿಸುವ ಯಾವುದೇ ತೆರಿಗೆಗಳು ನಿಬಂಧನೆಗಳು ಇದ್ದಲ್ಲಿ ಅಂತಹವುಗಳನ್ನು ಹೊರಗುತ್ತಿಗೆದಾರರು ತಮ್ಮ ಹಣದಿಂದ ಸಂದಾಯ ಮಾಡತಕ್ಕದ್ದು ಹಾಗೂ ಯಾವುದೇ ತರಹದ ಕಾನೂನು ತೊಡಕುಗಳು ಉದ್ಭವಿಸಿದಲ್ಲಿ ಅದನ್ನು ತಮ್ಮ ಸ್ವಂತ ಖರ್ಚಿನಿಂದಲೇ ಪರಿಹರಿಸಿಕೊಳ್ಳತಕ್ಕದ್ದು. ಇದಕ್ಕೆ ಸಂಬಂಧಪಟ್ಟಂತೆ ಈ ವಿಶ್ವವಿದ್ಯಾಲಯದ ಮೇಲೆ ಯಾವುದೇ ತರಹದ ಹಣಕಾಸಿನ ಹೊರೆ ಬೀಳದಂತೆ ನೋಡಿಕೊಳ್ಳುವ ಜವಾಬ್ದಾರಿಯು ಸಂಬಂದಪಟ್ಟ ಗುತ್ತಿಗೆದಾರರದ್ದೇ ಆಗಿರುತ್ತದೆ.

11. ಹೊರಗುತ್ತಿಗೆ ಸಿಬ್ಬಂದಿಗಳಿಗೆ ಈ ವಿಶ್ವವಿದ್ಯಾಲಯವು ನಿಗದಿಪಡಿಸಿದ ವೇತನಗಳು, ಹೊರಗುತ್ತಿಗೆ ಸೇವೆ ಪೂರೈಸಲು ಮಾಡಿಕೊಂಡ ಒಪ್ಪಂದದ ದಿನಾಂಕದಿಂದ **ಒಂದು ವರ್ಷದ ಅವಧಿಯವರೆಗೆ** ಜಾರಿಯಲ್ಲಿರುತ್ತದೆ.

12. ಗುತ್ತಿಗೆದಾರರು ಪೂರೈಸಿದ ಹೊರಗುತ್ತಿಗೆ ಸಿಬ್ಬಂದಿಗಳಿಂದ ಈ ವಿಶ್ವವಿದ್ಯಾಲಯಕ್ಕೆ ಯಾವುದೇ ತರಹದ ಹಾನಿ ಸಂಭವಿಸಿದಲ್ಲಿ ಅಂತಹ ಹಾನಿಯನ್ನು ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಿಂದ ಭರಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಅಂತಹ ಹಾನಿಯನ್ನು ಅವರಿಗೆ ಪಾವತಿಸಬೇಕಾಗಿರುವ ಬಿಲ್‌ನಿಂದ ಅಥವಾ ಭದ್ರತಾ ಠೇವಣಿ ಮೊತ್ತದಿಂದ ಕಡಿತಗೊಳಿಸುವ ಸಂಪೂರ್ಣ ಅಧಿಕಾರ ಈ ವಿಶ್ವವಿದ್ಯಾಲಯದ ಕುಲಸಚಿವರಿಗಿರುತ್ತದೆ.

13. ಕಾರ್ಮಿಕ ಇಲಾಖೆಯ ಪ್ರಕಾರ ಇ.ಎಸ್.ಐ, ಇ.ಪಿ.ಎಫ್., ಆದಾಯ ತೆರಿಗೆ ಹಾಗೂ ಸೇವಾ ತೆರಿಗೆಯ ನಿಯಮಾವಳಿಗಳನ್ನು ಚಾಚೂ ತಪ್ಪದೇ ಪಾಲಿಸುವುದು ಹಾಗೂ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದಂತಹ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸುವುದು.

14. ಈ ಮೇಲ್ಕಾಣಿಸಿದ ಯಾವುದೇ ಷರತ್ತು ಹಾಗೂ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಯಶಸ್ವಿ ಗುತ್ತಿಗೆದಾರರಿಗೆ ನೀಡಿರುವ ಹೊರಗುತ್ತಿಗೆ ಆದೇಶವನ್ನು ರದ್ದು ಪಡಿಸುವ ಸಂಪೂರ್ಣ ಅಧಿಕಾರ ಈ ವಿಶ್ವವಿದ್ಯಾಲಯವು ಹೊಂದಿರುತ್ತದೆ.

15. ಭದ್ರತಾ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಸಮವಸ್ತ್ರ, ಬೂಟ್‌ಗಳನ್ನು ಹವಾಮಾನಕ್ಕನುಗುಣವಾದ ಉಡುಪುಗಳನ್ನು ಹಾಗೂ ರಾತ್ರಿ ವೇಳೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಟಾರ್ಚನ್ನು ಹಾಗೂ ಲಾಠಿಗಳನ್ನು ಗುತ್ತಿಗೆ ಏಜನ್ಸಿದಾರರು ತಮ್ಮ ಸ್ವಂತ ಖರ್ಚಿನಿಂದ ಒದಗಿಸುವುದು.

16. ಈ ವಿಶ್ವವಿದ್ಯಾಲಯದ ಮುಖ್ಯ ಕಛೇರಿ, ಹೊಸ ಕಾನೂನು ಶಾಲೆ, ಪರೀಕ್ಷಾ ಭವನ, ವಿದ್ಯಾರ್ಥಿ ನಿಲಯಗಳಿಗೆ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸುವುದು ಹಾಗೂ ಈ ವಿಶ್ವವಿದ್ಯಾಲಯದ ಕುಲಸಚಿವರು ಸೂಚಿಸಿದ ಮೇರೆಗೆ ಆಯಾ ಸ್ಥಳಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸತಕ್ಕದ್ದು.

17. ಈ ವಿಶ್ವವಿದ್ಯಾಲಯದ ಚರ ಹಾಗೂ ಸ್ಥಿರಾಸ್ತಿಗಳಿಗೆ ಯಾವುದೇ ಧಕ್ಕೆ ಉಂಟಾಗದಂತೆ ನೋಡಿಕೊಂಡು ಹೋಗುವ ಸಂಪೂರ್ಣ ಜವಾಬ್ದಾರಿ ಭದ್ರತಾ ಸಿಬ್ಬಂದಿಗೆ ಇರುತ್ತದೆ. ಕಾರಣ, ಈ ವಿಶ್ವವಿದ್ಯಾಲಯದ ಆಸ್ತಿಗೆ ಯಾವುದೇ ರೀತಿ ಧಕ್ಕೆಯುಂಟಾದಲ್ಲಿ ಅದನ್ನು ಭರಿಸುವ ಜವಾಬ್ದಾರಿ ಹಾಗೂ ಆರ್ಥಿಕ ಹಾನಿಯನ್ನು ಗುತ್ತಿಗೆದಾರರೆ ಹೊರಬೇಕಾಗುತ್ತದೆ.

18. ಈ ವಿಶ್ವವಿದ್ಯಾಲಯದ ದಿನ ನಿತ್ಯದ ಕಾರ್ಯಕ್ಕಾಗಿ ಪೂರೈಸಲಾದ ನೌಕರರು ಸಂಪೂರ್ಣವಾಗಿ ಹೊರಗುತ್ತಿಗೆ ಸಂಸ್ಥೆಯವರ ಸಿಬ್ಬಂದಿಗಳಾಗಿರುತ್ತಾರೆ. ಅಂತಹ ನೌಕರರು ಯಾವುದೇ ಕಾರಣಕ್ಕೂ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅಥವಾ ಸೇವಾ ಹಕ್ಕನ್ನು ಪ್ರತಿಪಾದಿಸುವದಕ್ಕೆ ಯಾವ ಹಕ್ಕು ಇರುವುದಿಲ್ಲ.

19. ಈ ವಿಶ್ವವಿದ್ಯಾಲಯದಿಂದ ಹೊರಗುತ್ತಿಗೆ ನೌಕರರಿಗೆ ಯಾವುದೇ ಹಾಜರಾತಿ ಪ್ರಮಾಣ ಪತ್ರ ಅಥವಾ ಕಾರ್ಯನಿರ್ವಹಣಾ ಪತ್ರ ಇತ್ಯಾದಿ ವಿವರಗಳ ಪತ್ರಗಳನ್ನು ನೀಡಲಾಗುವದಿಲ್ಲ.

20. ಪೂರೈಸಲಾಗುವ ಭದ್ರತಾ ಸಿಬ್ಬಂದಿಗಳು ಕೆಲಸ ಕಾರ್ಯಗಳಲ್ಲಿ ಶಿಸ್ತು ಮತ್ತು ಸಂಯಮತೆ ಪಾಲನೆ ಮಾಡಬೇಕಿದ್ದು ಒಳ್ಳೆಯ ನಡತೆಯುಳ್ಳವರಾಗಿರಬೇಕು. ನಿಯಮಬಾಹಿರವಾಗಿ ನಡೆದುಕೊಂಡಲ್ಲಿ ಹಾಗೂ ಬೇಜವಾಬ್ದಾರಿಯಿಂದ ವರ್ತಿಸಿದಲ್ಲಿ, ನಿರ್ಲಕ್ಷ ಮನೋಭಾವನೆ ತಾಳಿದಲ್ಲಿ ಅಂತಹವರನ್ನು ಮುನ್ಸೂಚನೆ ನೀಡದೇ ಕೆಲಸದಿಂದ ವಜಾಗೊಳಿಸಲಾಗುವುದು ಹಾಗೂ ಅವರ ಸ್ಥಳದಲ್ಲಿ ಬೇರೆ



105

ಒಳ್ಳೆಯ ನಡತೆಯ ಸಿಬ್ಬಂದಿಯನ್ನು ಹೊರಗುತ್ತಿಗೆದಾರರು ಪೂರೈಸಬೇಕು.

21. ಒಂದು ವೇಳೆ ಗುತ್ತಿಗೆದಾರರು ಪೂರೈಸಿದ ಭದ್ರತಾ ಸಿಬ್ಬಂದಿ ಈ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಮಯದಲ್ಲಿ ಯಾವುದೇ ಅಪಘಾತಕ್ಕೀಡಾದಲ್ಲಿ/ಮರಣ ಹೊಂದಿದಲ್ಲಿ ಈ ವಿಶ್ವವಿದ್ಯಾಲಯವು ಜವಾಬ್ದಾರಿ ಆಗುವದಿಲ್ಲ. ಅದಕ್ಕೆ ಹೊರಗುತ್ತಿಗೆ ಏಜನ್ಸಿದಾರರೇ ಜವಾಬ್ದಾರರಾಗಿರುತ್ತಾರೆ.

22. ಏಜೆನ್ಸಿದಾರರು ಪೂರೈಸುವ ನೌಕರರ ಹಾಜರಾತಿಯನ್ನು, ಆಯಾ ಶಾಖೆಯ ನಿಯಂತ್ರಣಾಧಿಕಾರಿಗಳನ್ನು ಸಂಪರ್ಕಿಸಿ ಹಾಜರಾತಿಯನ್ನು ಪಡೆದುಕೊಂಡು, ಕ್ರೋಢೀಕೃತಗೊಳಿಸಿ, ವೇತನವನ್ನು ಪಾವತಿಸುವದು. ಹೀಗೆ ಪಾವತಿಸಿದ ವೇತನದ ಮರುಪಾವತಿಗಾಗಿ ಮಾಸಿಕ ವೇತನದ ಬಿಲ್ಲನ್ನು ತಯಾರಿಸಿ ಸಲ್ಲಿಸಬೇಕು. ಹೀಗೆ ಸಲ್ಲಿಸಿದ ಮರುಪಾವತಿ ಬಿಲ್ಲನ್ನು ಈ ವಿಶ್ವವಿದ್ಯಾಲಯದ ಹಣಕಾಸು ವಿಭಾಗದ ಪರಿಶೀಲನೆ ನಂತರ ಮರುಪಾವತಿ ಮಾಡಲಾಗುವದು.

23. ಈ ಮೇಲೆ ನಮೂದಿಸಿದ ಎಲ್ಲ ಷರತ್ತು ಹಾಗೂ ಸೂಚನೆಯನ್ನೊಳಗೊಂಡ ಕರಾರುನಾಮೆಯನ್ನು ಟೆಂಡರ್ ಸ್ವೀಕೃತಿಯ ಮಾಹಿತಿಯ ದಿನಾಂಕದಿಂದ 7 ದಿನಗಳೊಳಗೆ ಒಪ್ಪಂದ ಮಾಡಿಕೊಳ್ಳತಕ್ಕದ್ದು. ಹಾಗೂ ಇದಕ್ಕೆ ಅಗತ್ಯವಿರುವ **ರೂ. 200.00** (ಎರಡು ನೂರು ಮಾತ್ರ) ಮೌಲ್ಯದ ಛಾಪಾ ಕಾಗದವನ್ನು ಯಶಸ್ವಿ ಗುತ್ತಿಗೆದಾರರೇ ತಂದು ಈ ವಿಶ್ವವಿದ್ಯಾಲಯಕ್ಕೆ ಒದಗಿಸುವುದು.

24. ಈ ವಿಶ್ವವಿದ್ಯಾಲಯ ನಿಗದಿಪಡಿಸಲಾದ ಭದ್ರತಾ ಸಿಬ್ಬಂದಿಗಳ ಸಂಖ್ಯೆಗಳನ್ನು ಅವಶ್ಯಕತೆಗನುಗುಣವಾಗಿ ಪಡೆದುಕೊಳ್ಳಲಾಗುವುದು.

25. ಈ ವಿಶ್ವವಿದ್ಯಾಲಯದ ಕುಲಸಚಿವರಿಗೆ ಹೊರಗುತ್ತಿಗೆ ಸೇವೆಯು ಸಮಾಧಾನಕರವೆಂದು ಕಂಡುಬಂದಲ್ಲಿ ಗುತ್ತಿಗೆಯ ಅವಧಿಯನ್ನು ಹೆಚ್ಚುವರಿ ಷರತ್ತುಗಳಿಗೆ ಒಳಪಟ್ಟು ಮುಂದಿನ 4 ತಿಂಗಳುಗಳು ಅಥವಾ ಅದಕ್ಕಿಂತಲೂ ಕಡಿಮೆ ಅವಧಿಗೆ ವಿಸ್ತರಣೆ ಮಾಡಲು ಅವಕಾಶವಿರುತ್ತದೆ.

26. ಈ ವಿಷಯದ ಕುರಿತು ಯಾವುದೇ ತಂಟೆ-ತಕರಾರುಗಳು ಉದ್ಭವಿಸಿದಲ್ಲಿ ಈ ವಿಶ್ವವಿದ್ಯಾಲಯದ ಕುಲಪತಿಗಳು ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ ಹಾಗೂ ಅವರು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

27. ಹೊರಗುತ್ತಿಗೆ ಸೇವೆಗೆ ಸಂಬಂಧಿಸಿದ ನ್ಯಾಯಿಕ ವ್ಯಾಜ್ಯಗಳು ಉದ್ಭವಿಸಿದಲ್ಲಿ, ಸಿವಿಲ್ ನ್ಯಾಯಾಲಯ ಹುಬ್ಬಳ್ಳಿ ಹಾಗೂ ಹುಬ್ಬಳ್ಳಿಯಲ್ಲಿನ ಇತರ ನ್ಯಾಯಾಲಯಗಳು ದಾವೆಯ ಕ್ಷೇತ್ರವ್ಯಾಪ್ತಿಯ ನ್ಯಾಯಾಲಯಗಳಾಗಿರುತ್ತವೆ.

28. ಈ ಮೇಲೆ ನಮೂದಿಸಿದ ಕರಾರುಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಬದಲಾವಣೆ ಮಾಡುವ ಮತ್ತು ಹೆಚ್ಚಿನ ಕರಾರುಗಳನ್ನು ವಿಧಿಸುವ ಅಧಿಕಾರವು ಈ ವಿಶ್ವವಿದ್ಯಾಲಯಕ್ಕೆ ಇರುತ್ತದೆ.

ಕುಲಸಚಿವರು

# ತಾಂತ್ರಿಕ ಬಿಡ್ ಟೆಂಡರ್ ನಮೂನೆ

# Technical Bid

ಟೆಂಡರುದಾರರ ಇತ್ತೀಚಿನ ಭಾವಚಿತ್ರ ಲಗತ್ತಿಸಬೇಕು ಹಾಗೂ ಅದರ ಮೇಲೆ ಅವರ ಸಹಿ ಮಾಡಬೇಕು

| | | | |
|---|---|---|---|
| 1. | ಟೆಂಡರುದಾರರ ಪೂರ್ಣ ಹೆಸರು<br><br>Tenderer full name | : | |
| 2. | ಟೆಂಡರುದಾರರ ವಯಸ್ಸು<br><br>Age | : | |
| 3. | ಟೆಂಡರುದಾರರ/ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ<br><br>Tenderers/Firm full name and postal address | : | |
| 4. | ಸ್ಥಿರ ದೂರವಾಣಿ ಸಂಖ್ಯೆ<br><br>Land phone No. | : | |
| 5. | ಸಂಚಾರಿ ದೂರವಾಣಿ ಸಂಖ್ಯೆ<br><br>Mobile No. | : | |
| 6. | ಈ ವಿಶ್ವವಿದ್ಯಾಲಯದೊಂದಿಗೆ ಪತ್ರ ವ್ಯವಹಾರ ಮಾಡುವ ಟೆಂಡರುದಾರರು ಅಥವಾ ಅವರು ನೇಮಿಸಿರುವ ಸಿಬ್ಬಂದಿಯ ಹೆಸರು ಮತ್ತು ಪೂರ್ಣ ವಿಳಾಸ<br><br>Name and full address of the tenderer or his authorized agent who wants to correspond with this University. | : | |
| 7. | ಈಗಾಗಲೇ ಯಾವುದೇ ಇಲಾಖೆ/ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಭವಿಷ್ಯ ನಿಧಿ ಹಾಗೂ ನೌಕರರ ರಾಜ್ಯ ವಿಮಾ ಪಾವತಿ ಮಾಡಿದ ಬಗ್ಗೆ ವಿವರ. ಅಂದರೆ, ಇ.ಪಿ.ಎಫ್.ಗೆ ಸಂಬಂಧಿಸಿದಂತೆ [Employees Provident Fund Scheme 1952, para No. 38(3)] ರಲ್ಲಿ ನಮೂದಿಸಿದಂತೆ ಕಳೆದ ಸಾಲಿನಲ್ಲಿ ಪಾವತಿ ಮಾಡಿದ ಇ.ಸಿ.ಆರ್ ಚಲನ್ ಪ್ರತಿಗಳು ಹಾಗೂ ಇ.ಎಸ್.ಐ. ಪಾವತಿ ಮಾಡಿದ ಬಗ್ಗೆ ಆ ಇಲಾಖೆಯಿಂದ ಪಡೆದುಕೊಂಡ ಹಾಗೂ ದೃಢೀಕರಣಗೊಳಿಸಿದ ಇ.ಸಿ.ಆರ್ ಚಲನ್ ಪ್ರತಿಗಳು.<br><br>Particulars of EPF and ESI pertaining to employees engaged on outsource basis in any government department/private | : | |

105

| | | | |
|---|---|---|---|
| | organizations i.e., payment of EPF Annual Contribution in ECR copy (duly attested) as per para No. 38(3) of Employees Provident Fund Scheme 1952 and statement of ESI Annual Contribution paid during last year (duly attested).in any Institution/Organization. | | |
| 8. | ಭವಿಷ್ಯ ನಿಧಿ ನೋಂದಣಿ ಪ್ರಮಾಣ ಪತ್ರದ ಸಂಖ್ಯೆ ಮತ್ತು ದಿನಾಂಕ<br><br>EPF Registration No. and date: | : | |
| 9. | ನೌಕರರ ರಾಜ್ಯ ವಿಮೆ ನೋಂದಣಿ ಸಂಖ್ಯೆ ಮತ್ತು ದಿನಾಂಕ<br><br>ESI Registration No. and date: | : | |
| 10. | ಕಾರ್ಮಿಕ ಇಲಾಖೆಯಿಂದ ಕಾರ್ಮಿಕ ಗುತ್ತಿಗೆ ಸಂಬಂಧಿಸಿದಂತೆ ನೊಂದಣಿ ಪ್ರಮಾಣ ಪತ್ರದ ಪ್ರತಿ.<br><br>Registration certificate from Labour Department. | : | |
| 11. | 2019–20ಮತ್ತು 2020–21ನೇ ಸಾಲಿನ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ದೃಢೀಕೃತ ಪತ್ರದ ಪ್ರತಿ<br><br>Copies of Income Tax return for the financial year 2019-20 and 2020-21. | : | |
| 12. | ಯಾವುದಾದರು ಇಲಾಖೆ/ಸಂಸ್ಥೆಯಲ್ಲಿ ಹೊರಗುತ್ತಿಗೆ ಸೇವೆಯನ್ನು ನಿರ್ವಹಿಸುತ್ತಿದ್ದಲ್ಲಿ ಕಾರ್ಮಿಕ ಗುತ್ತಿಗೆದಾರರು ಪ್ರಸ್ತುತ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆ ಸಂಸ್ಥೆಯ ಹೆಸರು ಹಾಗೂ ಸಮರ್ಪಕ ಸೇವೆ ನಿರ್ವಹಿಸುತ್ತಿರುವ ಬಗ್ಗೆ ಆ ಸಂಸ್ಥೆಯಿಂದ ದೃಢೀಕರಣ ಪತ್ರ ಮತ್ತು ಆ ಸಂಸ್ಥೆಯ ದೂರವಾಣಿ ಸಂಖ್ಯೆ<br><br>Name of the Institution/Organization and its phone number where the Out-Source employees are engaged. And a letter from the institution towards rendering satisfactory service. | : | |
| 13. | 2019–20ಮತ್ತು 2020–21ನೇ ಸಾಲಿನಲ್ಲಿ ರೂ. 10.00 ಲಕ್ಷ ಅಥವಾ ಹೆಚ್ಚುವರಿಯಾಗಿ ವಹಿವಾಟು ಮಾಡಿರುವ ಕುರಿತು ಚಾರ್ಟರ್ಡ ಅಕೌಂಟೆಂಟ್ ರವರಿಂದ ಪಡೆದ ಪ್ರಮಾಣಪತ್ರ ಲಗತ್ತಿಸುವುದು.<br><br>Enclose turnover certificate from the Chartered Accountant for transaction of Rs. 10.00 lakhs and more, for the financial year 2019-20 and 2020-21. | : | |

| ಟೆಂಡರುದಾರರ ಇತ್ತೀಚಿನ ಭಾವಚಿತ್ರ ಲಗತ್ತಿಸಬೇಕು ಹಾಗೂ ಅದರ ಮೇಲೆ ಅವರ ಸಹಿ ಮಾಡಬೇಕು |
|---|

## ಆರ್ಥಿಕ ಬಿಡ್ ಟೆಂಡರ್ ನಮೂನೆ

## Financial Bid

1. ಹೊರಗುತ್ತಿಗೆದಾರರು / ಏಜನ್ಸಿದಾರರು, ಈ ವಿಶ್ವವಿದ್ಯಾಲಯದ ಹೊರಗುತ್ತಿಗೆ ಆಧಾರಿತ ಭದ್ರತಾ ಸಿಬ್ಬಂದಿಗಳ ಒಟ್ಟು ಹುದ್ದೆಯ ವೇತನಕ್ಕೆ ಶೇಕಡಾವಾರು ಸೇವಾ ಶುಲ್ಕವನ್ನು ನಮೂದಿಸತಕ್ಕದ್ದು. (ಪ್ರತಿ ಹುದ್ದೆಗೆ ಅಲ್ಲ)

   Tenderers are required to quote percentage of their commission against the total salary of the post mentioned here below. (Not for each post).

| ಅ. ನಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ | ಶೇಕಡವಾರು ಸೇವಾ ಶುಲ್ಕ |
|---|---|---|---|---|
| 1. | ಗ್ರೂಪ್ 'ಡಿ' ಭದ್ರತಾ ಸಿಬ್ಬಂದಿಗಳು | 25 | 12,982 x 25 = **3,24,550/-** | |

**ಒಟ್ಟು ಅಂದಾಜು ಮಾಸಿಕ ವೇತನ** **ರೂ. 3,24,550/-**

**ಒಟ್ಟು ಅಂದಾಜು ವಾರ್ಷಿಕ ವೇತನ** **ರೂ. 38,94,600/-**

**ಹೊರಗುತ್ತಿಗೆ ಟೆಂಡರುದಾರರ/ ಏಜನ್ಸಿದಾರರ ಸಹಿ**

**ಸಂಸ್ಥೆಯ ಮೊಹರಿನೊಂದಿಗೆ**